ದಿನಾಂಕಃ 19-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್ ಬಿ ಪಿ ವಕೀಲರಿಂದ</u>**

ನಾನು ಈ ಹಿಂದೆ ಸಾಕ್ಷ್ಯ ನುಡಿದ ನಂತರ ನಮ್ಮ ವಂಶವೃಕ್ಷದ ಬಗ್ಗೆ ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ26-06-2023ರ ವಂಶವೃಕ್ಷದ ನೋಟರೈಸ್ಡ್ ಪ್ರತಿಯಾಗಿದ್ದು ಸಾಕ್ಷಿ ಸದರಿ ವಂಶವೃಕ್ಷವನ್ನು ನೋಡಿ ಅದರಲ್ಲಿನ ವಿವರ ಸರಿಯಿದೆ ಎಂದು ಒಪ್ಪಿರುತ್ತಾರೆ. ಹಾಗಾಗಿ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1ರಂತೆ ಮೂಲಪುರುಷ ಚೆನ್ನವೀರಪ್ಪರವರಿಗೆ ವೀರಶೆಟ್ಟಪ್ಪ, ರುದ್ರಪ್ಪ ಮತ್ತು ಚೆನ್ನಪ್ಪ ಎನ್ನುವವರು ವಾರಸುದಾರರು ಎಂದರೆ ಸರಿ. ಅದರಂತೆ ಮೃತ ಚೆನ್ನಪ್ಪರವರಿಗೆ ಕಾಂತರಾಜು, ಚಂದ್ರಮ್ಮ, ಚಂದ್ರಶೇಖರ, ಧನಂಜಯ ಎನ್ನುವವರು ಮಕ್ಕಳು ಎಂದರೆ ಸರಿ. ಸದರಿ ವೀರಶೆಟ್ಟಪ್ಪ, ರುದ್ರಪ್ಪ ಮತ್ತು ಚೆನ್ನಪ್ಪ ರವರು ತಮ್ಮ ಜೀವಿತಾವಧಿಯಲ್ಲಾಗಲಿ ಅಥವಾ ವಾರಸುದಾರರಾಗಲಿ ಇದುವರೆಗೂ ತಮ್ಮ ಕುಟುಂಬದ ಆಸ್ತಿಗಳನ್ನು ಪಾಲುವಿಭಾಗಮಾಡಿಕೊಂಡಿಲ್ಲ ಎಂದರೆ ಸರಿ.

ದಾವಾಸ್ತಿ ಸಂಖ್ಯೆ -1 ರಿಂದ 5 , 7,8 ಮತ್ತು 10 ಕುರಿತು ಸಲ್ಲಿಸಿರುವ ಪಹಣಿಗಳಲ್ಲಿ ನನ್ನ ಹಾಗೂ ಪ್ರತಿವಾದಿಗಳ ಹೆಸರು ನಮೂದಾಗಿದೆ ಎಂದರೆ ಸರಿ. ಸದರಿ ದಾವಾಸ್ತಿಗಳಲ್ಲಿ ಮೃತ ಚೆನ್ನಪ್ಪನ ವಾರಸುದಾರರಾದ ಕಾಂತರಾಜು, ಚಂದ್ರಮ್ಮ, ಚಂದ್ರಶೇಖರ, ಧನಂಜಯರವರು ಸಹ ಸಾಗು ಮಾಡುತ್ತಿದ್ದರು ಸಹ ಸದರಿ ಪಹಣಿ ದಾಖಲೆಗಳಲ್ಲಿ ಅವರ ಹೆಸರು ನಮೂದಾಗಿಲ್ಲ ಎಂದರೆ ಸರಿ. ನಾನು ಮೃತ ಚೆನ್ನಪ್ಪನ ಸದರಿ ವಾರಸುದಾರರನ್ನು ಈ ದಾವೆಗೆ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸರಿ. ನಾವು ಯಾವತ್ತಿಗೂ ಸಹ ದಾವಾಸ್ತಿಗಳಲ್ಲಿ ಜಂಟಿ ಸ್ವಾಧೀನಾನುಭವದಲ್ಲಿ ಸಾಗು ಮಾಡುತ್ತಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯ ಹೆಂಡತಿಯ ಹೆಸರು ಲತ ಎಂದರೆ ಸರಿ. ಸದರಿ ಲತಾರವರ ತವರುಮನೆ ಹೊಸದುರ್ಗ ತಾಲ್ಲೂಕಿನ ಜಂತಿಹೊಳಲು ಗ್ರಾಮ ಎಂದರೆ ಸರಿ.

ಸದರಿ ಲತಾ ರವರು ಸದರಿ ಗ್ರಾಮದಲ್ಲಿ ತಮ್ಮ ಹೆಸರಿನಲ್ಲಿದ್ದ ಸರ್ವೆ ನಂ 6/1 ರ 3 ಎಕರೆ 11 ಗುಂಟೆ ಜಮೀನನ್ನು 2006ರಲ್ಲಿ ಕೆ ಮಲ್ಲಪ್ಪ ಬಿನ್ ಕರಿಯಪ್ಪನವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರದ ಕುರಿತು ಎಂಆರ್ ನಂ 21/2005-06 ರಂತೆ ಸದರಿಯವರ ಹೆಸರಿಗೆ ಬದಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಮಾರಾಟ ಮಾಡಿ ಬಂದ ಉತ್ಪತ್ತಿಯಿಂದ ಸದರಿ ಲತಾರವರು ಮುಗಿಲೇಹಳ್ಳಿ ಗ್ರಾಮದ ಸರ್ವೆ ನಂ 73/1ರಲ್ಲಿ 31 ಗುಂಟೆ ಜಮೀನನ್ನು ಚಂದ್ರಮ್ಮ ಕೋಂ ಚನ್ನಬಸಪ್ಪ ಎನ್ನುವವರಿಂದ 2005-06 ರಲ್ಲಿ ಕ್ರಯಕ್ಕೆ

ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದಂರಿ ವ್ಯವಹಾರದ ಕುರಿತು ಸದರಿ ಲತಾರವರ ಹೆಸರಿಗೆ ಎಂ ಆರ್ ನಂ 9/2005-06 ರಂತೆ ಮ್ಯೂಟೇಶನ್ ಸಹ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 4ನೇ ಪ್ರತಿವಾದಿಸರ್ವೆ ನಂ 75/5ರಲ್ಲಿನ1 ಎಕರೆ 11 ವರೆ ಗುಂಟೆ ಆಸ್ತಿಯನ್ನು ಎಂ ಜಿ ಶ್ರೀಕಂಠಪ್ಪ ಬಿನ್ ಪಟೇಲ್ ಬಸಪ್ಪರವರಿಂದ 2021ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾಸಿತಯಲ್ಲಿಸ ್ವಾ ಧೀನದಲ್ಲಿ ಇಲ್ಲದಕಾರಣ ನಿಗದಿತ ನ್ಯಾಯಾಲಯದ ಶುಲ್ಕವನ್ನು ಪಾವತಿಸಿಲ್ಲ ಎಂದರೆ ಸದರಿ ಪ್ರಶ್ನೆ ಕಾನೂನಾತ್ಮಕ ಪ್ರಶ್ನೆಯಾದ್ದರಿಂದ ಸದರಿ ಪ್ರಶ್ನೆಗೆ ಉತ್ತರಿಸಲು ವಿನಾಯತಿ ನೀಡಲಾಯಿತು. ನಾನು ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.